ಸರೋಜಿನಿ ದಾಮೋದರನ್ ಫೌಂಡೇಷನ್ ವಿದ್ಯಾದಾನ್ ವಿದ್ಯಾರ್ಥಿ ವೇತನ ಕಾರ್ಯಕ್ರಮದ ಅಡಿಯಲ್ಲಿ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕಾಲೇಜು ಶಿಕ್ಷಣಕ್ಕೆ ಬೆಂಬಲಿಸಲು ವಿದ್ಯಾರ್ಥಿ ವೇತನವನ್ನು ನೀಡುತ್ತಿದೆ. ಪ್ರಸ್ತುತ ವಿದ್ಯಾದಾನ ಕಾರ್ಯಕ್ರಮದ ಅಡಿಯಲ್ಲಿ ಒಟ್ಟು 3500 ವಿದ್ಯಾರ್ಥಿ ವೇತನವನ್ನು ಕೇರಳ, ಕರ್ನಾಟಕ, ತಮಿಳುನಾಡು, ಆಂದ್ರಪ್ರದೇಶ , ತೆಲಂಗಾನ ,ಒರಿಸ್ಸ ,ಮಾಹಾರಾಷ್ಟ ,ಗುಜಾರಾತ್ ಹಾಗು ಗೋವ ರಾಜ್ಯದ ವಿದ್ಯಾರ್ಥಿಗಳಿಗೆ ನೀಡಾಲಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿ 2014 ರಲ್ಲಿ ವಿದ್ಯಾದಾನ್ ವಿದ್ಯಾರ್ಥಿ ವೇತನ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಈ ವಿದ್ಯಾರ್ಥಿ ವೇತನವು ವಿದ್ಯಾರ್ಥಿಗಳ 10ನೇ ತರಗತಿಯ ಅರ್ಹತೆಯ ಹಾಗೂ ಆಯ್ಕೆ ಪ್ರಕ್ರೀಯೆಯ ಮೂಲಕ 2 ವರ್ಷಗಳ ಕಾಲದ ವಿದ್ಯಾರ್ಥಿ ವೇತನಕ್ಕೆ ಅರ್ಹತೆಯನ್ನು ಪಡೆಯುತ್ತದೆ ಹಾಗು ವಿದ್ಯಾರ್ಥಿಗಳ ಆಸಕ್ತಿಗೆ ಅನುಗುಣವಾಗಿ ಪದವಿಯವರೆಗೂ ಮುಂದುವರೆಸಲಾಗುವುದು. ಈ ವಿದ್ಯಾರ್ಥಿ ವೇತನವು ಫೌಂಡೇಷನ್ ನೋಂದಣಿ ಮಾಡಿದ ದಾನಿಗಳು ಹಾಗು ಬಾಹ್ಯ ದಾನಿಗಳ/ ಪ್ರಾಯೋಜಕರ ಮೂಲಕ ನೇರವಾಗಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. ವಿದ್ಯಾರ್ಥಿ ವೇತನವು ವಿದ್ಯಾರ್ಥಿಗಳ ಕೋರ್ಸ್, ರಾಜ್ಯ, ಅವಧಿಯ ಇತ್ಯಾದಿ ಆದಾರದಲ್ಲಿ ರೂ 10,000 ಗಳಿಂದ 60,000 ರೂಗಳ ವರೆಗೆ ನೀಡಲಾಗುವುದು ಹಾಗೂ ಆಯ್ಕೆಯಾದ ವಿದ್ಯಾರ್ಥಿಗಳು ಫೌಂಡೇಷನ್ ನಡೆಸುವ ಮಾರ್ಗದರ್ಶನ ತರಭೇತಿ ಕಾರ್ಯಕ್ರಮಕ್ಕೆ ಹಾಜರಾಗಬೇಕು.

## ವಿದ್ಯಾರ್ಥಿ ವೇತನ ಕಾರ್ಯಕ್ರಮಗಳು

ಈ ಕೆಳಗೆ ಪ್ರಸ್ತುತ ವಿದ್ಯಾರ್ಥಿ ವೇತನದ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ನಿಮಗೆ ಸಂಬಂಧಿಸಿದ ಮಾಹಿತಿಯನ್ನು ನೋಡಲು ಕೆಳಗಿನ ಪ್ರೋಗಾಂ ಮೇಲೆ ಕ್ಲಿಕ್ ಮಾಡಿರಿ.

### 2019 ಕರ್ನಾಟಕ ಪಿಯುಸಿ ಕಾರ್ಯಕ್ರಮ

ವಿದ್ಯಾರ್ಥಿ ವೇತನ ಪ್ರಮಾನ

11ನೇ ಮತ್ತು 12ನೇ ತರಗತಿಯ ವಿದ್ಯಾರ್ಥಿ ವೇತನದ ಪ್ರಮಾಣವು ಗರಿಷ್ಠ ವಾರ್ಷಿಕ 6000/ ರೂ.

ಯಾರು ಅರ್ಜಿ ಸಲ್ಲಿಸಬಹುದು ?.

2019 ನೇ ಸಾಲಿನಲ್ಲಿ 10ನೇ ತರಗತಿ ತೇರ್ಗಡೆಯಾಗಿರಬೇಕು ಮತ್ತು ಶೇ 90 ರಷ್ಟು ಅಂಕ/ A+ ನ್ನು ಪಡೆದಿರಬೇಕು, ಕುಟುಂಬದ ವಾರ್ಷಿಕ ಆದಾಯ 2 ಲಕ್ಷಕ್ಕಿಂತ ಕಡಿಮೆ ಇರಬೇಕು, ಅಂಗ ವೈಕಲ್ಯತೆ ಹೊಂದಿರುವ ಶೇ 75% ಅಂಕವನ್ನು ಪಡೆದಿರಬೇಕು.

## ಆಯ್ಕೆ ಪ್ರಕ್ರೀಯೆ

ಸರೋಜಿನಿ ದಾಮೋದರನ್ ಫೌಂಡೇಷನ್ ವಿದ್ಯಾರ್ಥಿಗಳು ಒದಗಿಸಿದ ಶೈಕ್ಷಣಿಕ ಸಾಧನೆ ಹಾಗು ಅರ್ಜಿಯ ಮಾಹಿತಿಯನ್ನು ಆಧರಿಸಿ ಆಯ್ಕೆ ಪ್ರಕ್ರಿಯೆ ಮಾಡಲಾಗುವುದು.ಆಯ್ಕೆಯಾದ ಅಭ್ಯರ್ಥಿಗಳಿಗೆ ಪರೀಕ್ಷೆ/ ಸಂದರ್ಶನದ ಮೂಲಕ ಮಾಡಲಾಗುವುದು. ಪರೀಕ್ಷೆ ಮತ್ತು ಸಂದರ್ಶನದ ನಡೆಯುವ ಸ್ಥಳದ ಬಗ್ಗೆ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ತಿಳಿಸಲಾಗುವುದು ಹಾಗು ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಪರೀಕ್ಷೆ ಮತ್ತು ಸಂದರ್ಶನಕ್ಕೆ ಹಾಜರಾಗಲು ಪ್ರಯಾಣದ ವೆಚ್ಚವನ್ನು ನೀಡಲಾಗುವುದು.

## ಪ್ರಮುಖ ದಿನಗಳು

ಜೂನ್ 15ನೇ 2019 : ಅರ್ಜಿಯನ್ನು ಹಾಕಲು ಕೊನೆಯ ದಿನಾಂಕ
ಜೂನ್ 29 ರಿಂದ ಜೂಲೈ 31 2019 : ಪರೀಕ್ಷೆ/ ಸಂದರ್ಶನ
ಪರೀಕ್ಷೆ/ ಸಂದರ್ಶನವು ನಡೆಯುವ ಸ್ಥಳವನ್ನು ಹಾಗೂ ದಿನಾಂಕವನ್ನು ಮೇಲೆ ತಿಳಿಸಿದಂತೆ ಅಭ್ಯರ್ಥಿಗಳಿಗೆ ತಿಳಿಸಲಾಗುವುದು ಹಾಗು ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಜುನ್ 25ರ ಒಳಗೆ ತಮ್ಮ ಪ್ರವೇಶ ಪತ್ರವನ್ನು ವಿದ್ಯದಾನ ವೆಬ್ ಮೂಲಕ ಪಡೆದುಕೋಳ್ಳಬಹುದು

**ಅಗತ್ಯ ದಾಖಲೆಗಳು**

ಕೆಳಕಂಡ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಸಂದರ್ಶನದ ಮೊದಲು ಸಲ್ಲಿಸಬೇಕು

ಅ. 10ನೇ ತರಗತಿಯ ಅಂಕಪಟ್ಟಿ ( ಮೂಲ ಪ್ರತಿ ಅಂಕಪಟ್ಟಿಯು ಇಲ್ಲಾದಿದ್ದಾಗ ತಾತ್ಕಾಲಿಕ ಅಂಕ ಪಟ್ಟಿ/ಆನ್‌ಲೆನ್ ಅಂಕಪಟ್ಟಿಯನ್ನು ನೀಡಬಹುದು)
ಆ. ಇತ್ತಿಚೀನ ಆದಾಯ ಪ್ರಮಾಣ ಪತ್ರ (ರೇಷನ್ ಕಾರ್ಡ್‌ನ್ನು ಅಂಗಿಕರಿಸುವುದಿಲ್ಲ)
ಇ. ಛಾಯಾಚಿತ್ರ
ಈ.ಅಂಗವಿಕಲತೆ ಪ್ರಮಾಣ ಪತ್ರ (ಅಂಗ ವೈಕಲ್ಯತೆ ಪ್ರಮಾಣ ಪತ್ರ )

**ಸಂಪರ್ಕ ವಿವರಗಳು**

ಹೆಚ್ಚಿನ ಮಾಹಿತಿಗಾಗಿ vidyadhan.karnataka@sdfoundationindia.com ಮತ್ತು ದೂರವಾಣಿ, ವಿಶ್ವನಾಥ ರವರ

8296010803 ಈ ಸಂಖ್ಯೆಯನ್ನು ಕಛೇರಿ ಸಮಯದಲ್ಲಿ ( ಸೋಮವಾರದಿಂದ ಶನಿವಾರದ ವರೆಗೆ ಬೆಳಗ್ಗೆ 9:00 ಗಂಟೆಯಿಂದ ಸಂಜೆ 6 ರ ತನಕ ಸಂಪರ್ಕಿಸಬಹುದು)

**ಅರ್ಜಿ ಹಾಕುವುದು ಹೇಗೆ?**

1. ನೀವು ಅರ್ಜಿಯನ್ನು ಹಾಕಲು ನಿಮ್ಮ ವಯ್ಯಕ್ತಿಕ ಇಮೇಲ್ ಖಾತೆಯನ್ನು ಹೊಂದಿರಬೇಕು. ನೀವೂ ಈಗಾಲೇ ಇಮೇಲ್ ಖಾತೆಯನು ಹೊಂದಿಲ್ಲದಿದ್ದಲ್ಲಿ ಹೊಸ ಇಮೇಲ್ www.gmail.com ಅಥಾವ ಇತರ ಇ ಮೇಲ್ ಖಾತೆಯನ್ನು ತೆರೆಯಬೇಕು. ದಯವಿಟ್ಟು ನಿಮ್ಮ ಇಮೇಲ್ ಖಾತೆಯ ಲಾಗಿನ್ ಮತ್ತು ಪಸ್‌ವರ್ಡನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು ಹಾಗು ಇತರರ ಇ ಮೇಲ್ ಖಾತೆಯನ್ನು ಅಂದರೆ ಇಂಟರ್ ನೆಟ್ ಕೇಂದ್ರದ /ಡಿ ಟಿ ಪಿ ಕೇಂದ್ರದ ಖಾತೆಯನ್ನು ಬಳಸಬೇಡಿ.

2. ಹೊಸ ಖಾತೆಯನ್ನು ನೋಂದಾಯಿಸಲು ಈ ಕೆಳಕಂಡ ವಿವರಗಳನ್ನು ನೀಡಬೇಕು.

ಅ. ಮೊದಲ ಹೆಸರು : ನಿಮ್ಮ ಶೈಕ್ಷಣಿಕ ದಾಖಲೆಗಳ ಪ್ರಕಾರ ನಿಮ್ಮ ಹೆಸರು ನಮೂದಿಸಿ.
ಆ. ಕೊನೆಯ ಹೆಸರು: ನಿಮ್ಮ ಶೈಕ್ಷಣಿಕ ದಾಖಲೆಗಳ ಪ್ರಕಾರ ನಿಮ್ಮ ಕೊನೆಯ ಹೆಸರು ನಮೂದಿಸಿ.
ಇ. ಇಮೇಲ್ ವಿಳಾಸ: ನಿಮ್ಮ ಇ ಮೇಲ್ ವಿಳಾಸವನ್ನು ಹಾಕುವುದು ಹಾಗು ಇ ಮೇಲ್‌ಖಾತೆಯನ್ನು ಪರಿಶೀಲಿಸುವುದು.
ಈ. ವಿದ್ಯಾದಾನ್ ಪಸ್‌ವರ್ಡ್: ನೀವು ಮೇಲೆ ರಚಿಸಿದ ಬಳಕೆದಾರ ಹೆಸರಿಗೆ ಪಸ್‌ವರ್ಡ್ ಆಯ್ಕೆ ಮಾಡಿ.ಆದರೆ ನೀವು ಇ ಮೇಲ್‌ನಲ್ಲಿ ಬಳಸಿದ ಪಸ್‌ವರ್ಡ್ ಇಲ್ಲಿ ಬಳಸಬಾರದು, ನೀವು 8 ಕನಿಷ್ಠ ಅಕ್ಷರಗಳ ಪಸ್‌ವರ್ಡ್‌ನ್ನು ರಚಿಸಬೇಕು,ಹಾಗು ನೀವು ರಚಿಸಿದ ಇ ಮೇಲ್ ಪಸ್‌ವರ್ಡ್ ಮತ್ತು ವಿದ್ಯಾದಾನ್ ಪಸ್‌ವರ್ಡ್‌ನ್ನು ಭವಿಷ್ಯದ ಸಂವಹನಕ್ಕಾಗಿ ದಯವಿಟ್ಟು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ನೀವೆನಾದರು ಪಸ್‌ವರ್ಡ್ ಮರೆತು ಹೋದ ಸಂದರ್ಭದಲ್ಲಿ ಪಸ್ ವರ್ಡ್‌ನ್ನು ಹಿಂಪಡೆಯಲು ಸಹ ಅವಕಾಶ ಇರುತ್ತದೆ.

3. ಈಗ ನೀವು **Apply Now** ಬಟನನ್ನು ಒತ್ತಿರಿ ಆಗ ಇಮೇಲ್‌ಗೆ ಖಾತೆಯನ್ನು ಸಕ್ರಿಯಗೊಳಿಸುವ ಲಿಂಕ್‌ನ್ನು ನಿಮ್ಮ ಇಮೇಲ್‌ಗೆ ಕಳುಹಿಸಲಾಗುವುದು.
4. ಈಗ ನೀವು ನಿಮ್ಮ ಇಮೇಲ್ ಖಾತೆಯನ್ನು ತೆರೆದು ಸಕ್ರಿಯಗೊಳಿಸುವ ಲಿಂಕ್‌ನ್ನು ಕ್ಲಿಕ್ ಮಾಡಿ ನಂತರ ನೀವು ಸಕ್ರಿಯಗೊಂಡ ಲಾಗಿನ್ ರೂಪ ಮುಖಪುಟ ತೆರೆಯುತ್ತದೆ.
5. ಇಮೇಲ್ ಖಾತೆಯು ಮತ್ತು ನೀವು ಹೊಸ ಖಾತೆಯನ್ನು ನೋಂದಹಿಸಿಕೊಳ್ಳುವ ಹಂತ 2 ರಲ್ಲಿ ಇರುವಂತೆ ವಿದ್ಯಾದಾನ್ ಲಾಗಿನ್ ಆಗಿ ಪಾಸ್ ವರ್ಡ್ ನಮೂದಿಸಿರಿ.
6. ನೀವು ಲಾಗಿನ ಆದ ನಂತರ ನೀವು ಮುಖ್ಯ ಮೆನುವಿನಲ್ಲಿ 'ಸಹಾಯ' / **Help** ಎಂಬ ಲಿಂಕನ್ನು ನೋಡಬಹುದು.ಇದರಿಂದ ನೀವು ಅರ್ಜಿಯನ್ನು ಹೇಗೆ ತುಂಬುಹುದು,ನವಿಕರಿಸುವುದು ಎಂಬುದನ್ನು ತಿಳಿಯಲು,ಸಹಾಯ ಮತ್ತು ಸೂಚನೆಗಳನ್ನು ಓದಲು ಈ ಲಿಂಕನ್ನು ಕ್ಲಿಕ್ ಮಾಡಿರಿ
7. ಪಟ್ಟಿಯಲ್ಲಿ ಲಭ್ಯವಿರುವ ಪ್ರೋಗ್ರಾಂಗಳು ಸೂಕ್ತ ವಿದ್ಯಾರ್ಥಿ ವೇತನ ಕಾರ್ಯಕ್ರಮದಲ್ಲಿ ಆಯ್ಕೆ ಮತ್ತು ನೀಮ್ಮ ಅಪ್ಲಿಕೇಶನ್ ರಚಿಸಲು **'Apply Now "** ಬಟನ್ ಕ್ಲಿಕ್ ಮಾಡಿರಿ
8. ಅಪ್ಲಿಕೇಶನ್ ರಚಿಸಿದ ನಂತರ ನೀವು ಮತ್ತೊಮ್ಮೆ ಬೇಕಾದರು ಬದಲಾವಣೆ ಮಾಡಲು **Edit** ಬಟನ್ ಕ್ಲಿಕ್ ಮಾಡಿರಿ.
9. **SDF** ಅವರಿಂದ ಸಂವಹನ ಮತ್ತು ನವೀಕರಣಕ್ಕಾಗಿ ನಿಯಮಿತವಾಗಿ ನಿಮ್ಮ ಇಮೇಲ್ ಮತ್ತು ಎಸ್,ಎಂ,ಎಸ್ ನ್ನು ಆಗಾಗ ಪರಿಶೀಲಿಸಿರಿ.

¸À